# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

**ಸಿ.ಸಿ. ನಂ. 149/2022**

**ಸಿ.ಡಬ್ಲ್ಯೂಃ 9, ಪಿ.ಡಬ್ಲ್ಯೂಃ 7**

| | | |
|---|---|---|
| **ಸಾಕ್ಷಿದಾರರ ಹೆಸರು** | : | ದೇವರಾಜ ಜಗನ್ನಾಥ್ ಶೆಟ್ಟಿ |
| **ತಂದೆಯ ಹೆಸರು** | : | ಜಗನ್ನಾಥ್ ಶೆಟ್ಟಿ |
| **ವಯಸ್ಸು** | : | 47 ವರ್ಷ |
| **ಉದ್ಯೋಗ** | : | ಪಾನ್ ಅಂಗಡಿ |
| **ವಾಸ** | : | ಕಟಪಾಡಿ, ಉಡುಪಿ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 12-09-2023**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ಚಾಸಾ-1 ನನ್ನ ಹೆಂಡತಿ. ದಿ.27-11-2019 ರಂದು ನಾನು ನನ್ನ ಹೆಂಡತಿ ಚಾಸಾ-1 ರವರು ಮುಂಬೈ ಯಿಂದ ಉಡುಪಿಗೆ ಮತ್ಸ್ಯಗಂಧ ಎಕ್ಸಪ್ರೆಸ್ ರೈಲಿನಲ್ಲಿ ಬರುತ್ತಿದ್ದೆವು. ಅದೇ ದಿನ ರಾತ್ರಿ ಅಂದರೆ ದಿ.28-11-2019 ರಂದು ನಮ್ಮ ರೈಲು ಮುರ್ಡೇಶ್ವರ ಬಂದಿತ್ತು. ನಾನು ಟ್ರೈನಿನಲ್ಲಿ ಮಲಗಿದ್ದೆನು. ನನ್ನ ಹೆಂಡತಿ ಚಾಸಾ-1 ರವರು ಮೊಬೈಲು ನೋಡುತ್ತಾ ಕುಳಿತ್ತಿದ್ದರು. ಅಚಾನಕ್ಕಾಗಿ ಚಾಸಾ-1 ರವರು ಕೂಗಿಕೊಂಡ ಶಬ್ಧ ನನಗೆ ಕೇಳಿಸಿತು. ಆಗ ನಾನು ಚಾಸಾ-1 ರವರನ್ನು ವಿಚಾರಿಸಿದಾಗ ತನ್ನ ಸಣ್ಣ ಬ್ಯಾಗ್ ಕಳವಾಗಿದೆ ಎಂದು ತಿಳಿಸಿದರು. ಆಗ ಪ್ರಯಾಣಿಕರು ಟ್ರೈನಿನ ಚೈನ್ ಎಳೆದು ಟ್ರೈನನ್ನು ನಿಲ್ಲಿದ್ದರು. ಅಷ್ಟರಲ್ಲಿ ಕಳ್ಳರು ಚಾಸಾ-1 ರವರ ಬ್ಯಾಗ್ ತೆಗೆದುಕೊಂಡು ಓಡಿ ಹೋಗಿದ್ದರು. ಚಾಸಾ-1 ರವರ ಬ್ಯಾಗಿನಲ್ಲಿ ಎಂಓ-2 ರಿಂದ 6 ರ ಬಂಗಾರದ ಆಭರಣಗಳು ಇದ್ದವು. ಅದರಲ್ಲಿ ಒಂದು ಮೊಬೈಲು, ನನ್ನ ಒಂದು ಎ.ಟಿ.ಎಂ ಕಾರ್ಡ್ , ಒಂದು ಪರ್ಸ್ ಮತ್ತು ಇನ್ನೆರಡು ಮೊಬೈಲು ಮತ್ತು ಹಣ ರೂ.36,000/- ಇದ್ದವು. ನಂತರ ನಾವು ಮುರ್ಡೇಶ್ವರ ಠಾಣೆಗೆ ಹೋಗಿ ದೂರು ಸಲ್ಲಿಸಿದೆವು.

(ನ್ಯಾಯಾಲಯದ ಊಟದ ಬಿಡುವಿನ ಸಮಯವಾಗಿದ್ದರಿಂದ ಮುಂದುವರಿದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಸಿ.ಡಬ್ಲ್ಯೂ 9, ಪಿ.ಡಬ್ಲ್ಯೂ 7**

**ದಿನಾಂಕಃ 12-09-2023**

**ಮಧ್ಯಾಹ್ನದ ವಿರಾಮದ ನಂತರ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ನಂತರ ದಿ. 29-11-2019 ರಂದು ಚಾಸಾ-1 ರವರಿಗೆ ಫೋನು ಮಾಡಿ ಕಳ್ಳತನ ಮಾಡಿದ ಕಳ್ಳರು ಸಿಕ್ಕಿರುತ್ತಾರೆ, ಆಭರಣಗಳನ್ನು ಮತ್ತು ಆರೋಪಿತರನ್ನು ಗುರುತಿಸಲು ಠಾಣೆಗೆ ಬರಲು ತಿಳಿಸಿದರು. ಅದರಂತೆ ನಾವು ಠಾಣೆಗೆ ಹೋದೆವು. ಆಗ ಪೋಲಿಸರು ಆರೋಪಿತರನ್ನು ನಮಗೆ ತೋರಿಸಿದರು, ಆಗ ಚಾಸಾ-1 ರವರು ಆರೋಪಿತರನ್ನು ಗುರುತಿಸಿದರು. ನಂತರ ನಮಗೆ ಸೇರಿದ ಆಭರಣಗಳನ್ನು ಗುರುತಿಸಲು ತಿಳಿಸಿದರು. ಆಗ ನಾವು ನಮ್ಮ ಆಭರಣ, ಮೊಬೈಲನ್ನು ಗುರುತಿಸಿದೆವು. ಹಣ ಗುರುತಿಸಿದಾಗ ಅದರಲ್ಲಿ ರೂ.34,200/- ಹಣ ಇತ್ತು. ಉಳಿದ ಹಣವನ್ನು ಆರೋಪಿತರು ಖರ್ಚು ಮಾಡಿರುವುದಾಗಿ ತಿಳಿಯಿತು. ಬ್ಯಾಗಿನಲ್ಲಿ ರೂ. 5/- ರ ಕಾಯಿನ್ ಗಳು ಇದ್ದವು ಅವುಗಳು ಈಗ ನ್ಯಾಯಾಲಯದ ಮುಂದಿರುತ್ತವೆ. ನಂತರ ನ್ಯಾಯಾಲಯದಿಂದ ನಾವು ಆಭರಣಗಳನ್ನು ನಾವು ವಶಕ್ಕೆ ಪಡೆದಿರುತ್ತೇವೆ. ನಾನು ಪೋಲಿಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತೇವೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವಿ.ಸಿ. ಮುಖಾಂತರ ಹಾಜರಾದ 2 ನೇ ಆರೋಪಿಯನ್ನು ಗುರುತಿಸಿರುತ್ತಾರೆ. 1 ಮತ್ತು 3 ನೇ ಆರೋಪಿತರನ್ನು ಸ್ಪ್ಲಿಟ್ ಅಪ್ ಮಾಡಲಾಗಿದೆ. ನನ್ನ ವಶದಲ್ಲಿರುವ ಆಭರಣಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ಸಾಕ್ಷಿ ಸದರಿ ಆಭರಣಗಳನ್ನು ಈ ದಿನ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಅವುಗಳನ್ನು ಗುರುತಿಸಿದ ನಂತರ ಸಾಕ್ಷಿಗೆ ಅವುಗಳನ್ನು ಅವರ ವಶಕ್ಕೆ ನೀಡಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಜಿ.ಎನ್ ವಕೀಲರಿಂದಃ**

ಘಟನೆಯ ಸಮಯದಲ್ಲಿ ನಾನು ರೈಲಿನಲ್ಲಿ ನಿದ್ದೆ ಮಾಡುತ್ತಿದ್ದೆನು ಎಂದರೆ ಸರಿ. ಘಟನೆಯಾದ ನಂತರ ನನಗೆ ಎಚ್ಚರವಾಗಿರುತ್ತದೆ ಎಂದರೆ ಸರಿ. ಟ್ರೈನಿನ ಚೈನನ್ನು ಯಾರು ಎಳೆದಿದ್ದರು ಎಂದು ನನಗೆ ಗೊತ್ತಿಲ್ಲ. ಘಟನೆಯಾದಾಗ ಕತ್ತಲು ಕವಿದಿತ್ತು ಎಂದರೆ ಸರಿ. ಆದ್ದರಿಂದ ಆರೋಪಿಯನ್ನು ಗುರುತಿಸಲು ಕಷ್ಟವಾಗುತ್ತಿತ್ತು ಎಂದರೆ ಸಾಕ್ಷಿ ಆರೋಪಿತರನ್ನು ಚಾಸಾ-1 ರವರು ನೋಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರು ಕಳ್ಳತನ ಮಾಡಿದ್ದಾರೆ ಎಂದು ಪೋಲಿಸರ ಹೇಳಿಕೆ ಮೇರೆಗೆ ನಾನು ಹೇಳುತ್ತಿದ್ದೇನೆ ಎಂದರೆ ಸರಿ. ನಾವು ಉಡುಪಿಗೆ ಹೋಗಿ ನಂತರ ಮುರ್ಡೇಶ್ವರ

ಪೋಲಿಸ್ ಠಾಣೆಗೆ ಹೋಗಿರುತ್ತೇವೆ. ದೂರನ್ನು ಚಾಸಾ–1 ರವರು ಹೇಳಿದಂತೆ ಪೋಲಿಸರು ಬರೆದಿರುತ್ತಾರೆ. ಚಾಸಾ–1 ರವರ ಕಳ್ಳತನವಾದ ಬ್ಯಾಗ್ ಕಪ್ಪು ಬಣ್ಣದ್ದಾಗಿತ್ತು. ಅದು ಈಗ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ನಾನು ಠಾಣೆಯಲ್ಲಿ ಒಂದೇ ಸಹಿ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಆದ್ದರಿಂದ ನನಗೆ ನನ್ನ ಹೇಳಿಕೆಯಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ ಎಂದರೆ ಸರಿ. ಆರೋಪಿತರು ಯಾವುದೇ ಕಳ್ಳತನ ಮಾಡಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

**ಸಿ.ಸಿ. ನಂ. 149/2022**

**ಸಿ.ಡಬ್ಲ್ಯೂಃ 8, ಪಿ.ಡಬ್ಲ್ಯೂಃ 6**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಗಣೇಶ ಮಂಗೇಶ ಭಟ್ |
| **ತಂದೆಯ ಹೆಸರು** | : | ಮಂಗೇಶ ಭಟ್ |
| **ವಯಸ್ಸು** | : | 43 ವರ್ಷ |
| **ಉದ್ಯೋಗ** | : | ಅಕ್ಕಸಾಲಿಗ |
| **ವಾಸ** | : | ಮುರ್ಡೇಶ್ವರ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 12-09-2023**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ, ಅದು ಜಪ್ತು ಪಂಚನಾಮೆ ಇದ್ದು, ಅದನ್ನು ಈಗಾಗಲೇ ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ನಿಪಿ-9 ಕ್ಕೆ ಪೋಲಿಸರು ಕಳ್ಳತನವಾದ ಪ್ರಕರಣದಲ್ಲಿ ಬಂಗಾರ ಜಪ್ತುಪಡಿಸಿಕೊಂಡಿದ್ದಕ್ಕೆ ಅವುಗಳನ್ನು ಪರಿಶೀಲಿಸಲು ನನ್ನನ್ನು ಕರೆಸಿದ್ದರು. ಅವುಗಳನ್ನು ಪರಿಶೀಲಿಸಿದಾಗ ಅವುಗಳು ಬಂಗಾರದ್ದಾಗಿದ್ದವು. ಸದರಿ ದಿನ ಚಾಸಾ-9 ರವರು ತಮ್ಮ ಮಧ್ಯಂತರ ಆಭರಣಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಸಾಕ್ಷಿಗೆ ಅವುಗಳನ್ನು ತೋರಿಸಲಾಯಿತು. ಸಾಕ್ಷಿ ಆಭರಣಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಎಂಓ 2 ರಿಂದ 6 ಎಂದು ಗುರುತಿಸಲಾಗಿದೆ. ಆ ಬಗ್ಗೆ ನಾನು ಪೋಲಿಸರಿಗೆ ಪ್ರಮಾಣ ಪತ್ರ ನೀಡಿರುತ್ತೇನೆ. ಅದನ್ನು ನೊಡುತ್ತಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಜಿ.ಎನ್ ವಕೀಲರಿಂದಃ**

ಸದರಿ ದಿನ ನನ್ನನ್ನು ಮುರ್ಡೇಶ್ವರ ಪೋಲಿಸರು ಕರೆದಿದ್ದರು. ಆದರೆ ಅವರ ಹೆಸರು ನನಗೆ ನೆನಪಿಲ್ಲ. ಎಂಓ-2 ರಿಂದ 6 ರ ನಿಖರವಾದ ತೂಕ ಈಗ ನನಗೆ ನೆನಪಿರುವುದಿಲ್ಲ. ನಾನು ಬಂಗಾರ

ಪರಿಶೀಲಿಸುವಾಗ ಪೋಲಿಸರು ಮತ್ತು ನಾನು ಮಾತ್ರ ಇದ್ದೆವು ಎಂದರೆ ಸರಿಯಲ್ಲ. ಇತರ ಸಾಕ್ಷಿದಾರರು ಇದ್ದರು ಎಂದು ನುಡಿಯುತ್ತಾರೆ. ಎಂಒ–2 ರಿಂದ 6 ನಿಖರವಾಗಿ ಯಾರ ಬಳಿಯಿಂದ ವಶಪಡಿಸಿಕೊಳ್ಳಲಾಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲಿಸರ ಕೋರಿಕೆಯ ಮೇರೆಗೆ ನಾನು ಪರಿಶೀಲಿಸಿ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

**ಸಿ.ಸಿ. ನಂ. 149/2022**

**ಸಿ.ಡಬ್ಲ್ಯೂ: 7, ಪಿ.ಡಬ್ಲ್ಯೂ: 5**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಗುರು ಮಾದೇವ ನಾಯ್ಕ |
| **ತಂದೆಯ ಹೆಸರು** | : | ಮಾದೇವ ನಾಯ್ಕ |
| **ವಯಸ್ಸು** | : | 32 ವರ್ಷ |
| **ಉದ್ಯೋಗ** | : | ಶಿಲ್ಪಿ |
| **ವಾಸ** | : | ಮುರ್ಡೇಶ್ವರ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 12-09-2023**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ, ಅದು ಜಪ್ತು ಪಂಚನಾಮೆ ಇದ್ದು, ಅದನ್ನು ಈಗಾಗಲೇ ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನಿಪಿ-9 ಕ್ಕೆ ದಿ. 29-11-2019 ರಂದು ಪೋಲಿಸ್ ಠಾಣೆಯಲ್ಲಿ ಕಳ್ಳತನ ಮಾಡಿದ ವಿಚಾರಕ್ಕಾಗಿ ಆಭರಣಗಳ ಸಂಬಂಧ ಪಂಚನಾಮೆ ಮಾಡಿದ್ದಕ್ಕೆ ಸಹಿ ಮಾಡಿದ್ದೇನೆ. ಪಂಚನಾಮೆ ಕಾಲಕ್ಕೆ ನನಗೆ ಬಂಗಾರ, ಹಣವನ್ನು ಮತ್ತು ಬ್ಯಾಗನ್ನು ತೋರಿಸಿದ್ದರು. ಪಂಚನಾಮೆ ಮಾಡುವಾಗ ನನ್ನೊಂದಿಗೆ ಚಾಸಾ-6 ಮತ್ತು 8 ರವರು ಇದ್ದರು. ಪಂಚನಾಮೆಯನ್ನು 1.45 ರಿಂದ 3.45 ರವರೆಗೆ ಮಾಡಲಾಯಿತು. ನಂತರ ಈಗ ತೋರಿಸುತ್ತಿರುವ ಇನ್ನೊಂದು ದಾಖಲೆಯಲ್ಲಿ ನನ್ನ ಸಹಿ ಇದೆ, ಅದು ಆರೋಪಿ ತೋರಿಸಿದ ಸ್ಥಳದ ಪಂಚನಾಮೆಯಿದ್ದು, ಅದನ್ನು ನಿಪಿ-5 ಎಂದು , ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ನಿಪಿ-5 ಕ್ಕೆ ಪೋಲಿಸರು ರೈಲ್ವೇ ಸ್ಟೇಶನ್ ನ ಬಳಿ ಕರೆದುಕೊಂಡು ಹೋಗಿದ್ದರು. ಅಲ್ಲಿ ಸಹಿ ಮಾಡಿರುತ್ತೇನೆ. ಸದರಿ ಆರೋಪಿತನು ತಾನು ರೈಲ್ವೇ ಪ್ಲಾಟ್ ಫಾರ್ಮ್ ನಂ.17 ಮತ್ತು 18 ರಲ್ಲಿ ಕಳ್ಳತನ ಮಾಡಿದ್ದಾಗಿ ಸ್ಥಳ ತೋರಿಸಿದ್ದ, ಆ ವಿಚಾರವಾಗಿ ಪಂಚನಾಮೆ ಮಾಡಿದ್ದರು. ಸದರಿ ಪಂಚನಾಮೆಯನ್ನು 4.30 ರಿಂದ 5.30 ರವರೆಗೆ ಮಾಡಲಾಯಿತು. ಪಂಚನಾಮೆ ಕಾಲಕ್ಕೆ ಫೊಟೊ ತೆಗೆದಿರುತ್ತಾರೆ. ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದೆ. ನಿಪಿ-5 ರಂತೆ ಪಂಚನಾಮೆ ಮಾಡುವಾಗ ಚಾಸಾ-6 ರವರು ಹಾಜರಿದ್ದರು. ಠಾಣೆಯಲ್ಲಿ ಪಂಚನಾಮೆ ಮಾಡಿದ ಆಭರಣ ಮತ್ತು ಹಣವನ್ನು ನೋಡಿದರೆ

ಗುರುತಿಸುತ್ತೇನೆ. ಸದರಿ ದಿನ ಚಾಸಾ–9 ರವರು ತಮ್ಮ ಮಧ್ಯಂತರ ಆಭರಣಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಸಾಕ್ಷಿಗೆ ಅವುಗಳನ್ನು ತೋರಿಸಲಾಯಿತು. ಸಾಕ್ಷಿ ಆಭರಣಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ಒಂದು ಮೊಬೈಲು ಮತ್ತು ಪೋಲಿಸರು ಹಾಜರುಪಡಿಸಿದ ಹಣವನ್ನು ತೋರಿಸಲಾಗಿರುತ್ತದೆ. ಅವುಗಳನ್ನು ಈಗಾಗಲೇ ಎಂಓ 1 ರಿಂದ 8 ಎಂದು ಗುರುತಿಸಲಾಗಿದೆ. ಗುರುತಿಸಿದ ನಂತರ ಸದರಿ ಎಂಓ 2 ರಿಂದ 7 ಬಂಗಾರದ ಆಭರಣಗಳನ್ನು ಮತ್ತು ಒಂದು ಮೊಬೈಲನ್ನು ಅವರಿಗೆ ಹಿಂದಿರುಗಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ</u>  ಆರೋಪಿ ಪರ ಶ್ರೀ ಆರ್.ಜಿ.ಎನ್ ವಕೀಲರಿಂದಃ**

ಸದರಿ ದಿನ ನನ್ನನ್ನು ಪೋಲಿಸರು ಕರೆಸಿರುವುದಿಲ್ಲ. ನಾನು ಬೇರೆ ಕೆಲಸಕ್ಕಾಗಿ ಠಾಣೆಗೆ ಹೋಗಿದ್ದೆನು. ನಾನು ಠಾಣೆಯಲ್ಲಿದ್ದಾಗ ನಿಪಿ–9 ರಂತೆ ಪಂಚನಾಮೆಯನ್ನು ತಯಾರಿಸುತ್ತಿದ್ದರು. ನಿಪಿ–9 ರಲ್ಲಿ ಬರೆದಿರುವ ಮಾಹಿತಿ ನನಗೆ ಇರುವುದಿಲ್ಲ ಎಂದರೆ ಸರಿ. ನಿಪಿ–9 ರಲ್ಲಿ ಯಾವ ಆರೋಪಿಯಿಂದ ಯಾವ ವಸ್ತುಗಳನ್ನು ಜಪ್ತುಪಡಿಸಿಕೊಳ್ಳಲಾಯಿತು ಎಂದು ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲಿಸರು ಆರೋಪಿಯನ್ನು ತೋರಿಸಿದ್ದಕ್ಕೆ ಆರೋಪಿಯನ್ನು ಗುರುತಿಸಿರುತ್ತೇನೆ ಎಂದರೆ ಸರಿ. ಪಂಚನಾಮೆಯನ್ನು ಕಳ್ಳತನವಾದ ರೈಲಿನ ಬೋಗಿಯಲ್ಲಿ ಮಾಡಿಲ್ಲ ಎಂದರೆ ಸರಿ. ಆರೋಪಿ ರೈಲ್ವೇ ಟ್ರ್ಯಾಕ್ ನಂ.17 ಮತ್ತು 18 ರಲ್ಲಿ ತೋರಿಸಿದ್ದಕ್ಕೆ ಪಂಚನಾಮೆ ಮಾಡಲಾಗಿದೆ ಎಂದರೆ ಸರಿ. ಆರೋಪಿಗೂ ಮತ್ತು ಮುದ್ದೆಮಾಲಿಗೂ ಯಾವುದೇ ಸಂಬಂಧ ಇಲ್ಲ, ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–11 ರವರ ಪರಿಚಯ ನನಗೆ ಇರುವುದಿಲ್ಲ. ನಿಪಿ–9 ಕ್ಕೆ ಸಹಿ ಮಾಡುವಾಗ ನಾನು ಒಬ್ಬನೇ ಇದ್ದೆನು. ಆಗ ನನ್ನೊಂದಿಗೆ ಚಾಸಾ–6 ರವರು ಇದ್ದರು. ಎರಡೂ ದಾಖಲೆಗಳಿಗೆ ನಾನು ಪೋಲಿಸ್ ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ ಒಂದು ಪೋಲಿಸ್ ಠಾಣೆಯಲ್ಲಿ ಮತ್ತು ಇನ್ನೊಂದು ರೈಲ್ವೇ ಸ್ಟೇಶನಿನಲ್ಲಿ ಸಹಿ ಮಾಡಿದ್ದೇನೆ ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**